ಚೆನ್ನಾಗಿ ಗೊತ್ತಿದೆ. ಮೆಫ್ರೀನ್ ಇನ್ನು ಯಾಕಾಗಿ ಈ ಕಾರ್ತಿಕೇಯನ್‌ನನ್ನ ಹುಡುಕಿಕೊಂಡು ಬರ್ತಾಳೆ ಹೇಳಿ ಸಾಹೇಬ್ರೆ' ಎಂದು ಗುಟ್ಟೊಂದನ್ನು ನನ್ನ ಬಳಿ ರಟ್ಟು ಮಾಡಿದ್ದ. ನನ್ನ ಮತ್ತು ನನ್ನ ಹೆಂಡತಿ ಆಶಾ ಬೆಂಗತಮಲೆ ನಡುವೆ ಉಂಟಾಗಿರುವ ಭಿನ್ನಾಭಿಪ್ರಾಯದ ವಿದ್ಯಮಾನ ಕೂಡಾ ಇಂಥದ್ದೇ ನೆಲೆಯಲ್ಲಿ ಒಡಮೂಡಿರಬಹುದೇನೋ ಎಂಬ ಆಲೋಚನೆ ಥಟ್ಟನೆ ಹುಟ್ಟಿಕೊಂಡಿತ್ತು. ನಡುಮನೆಯ ಟೀವಿ ಪರದೆಯ ಮೇಲೆ ಮಳೆ ಮತ್ತು ಪ್ರವಾಹದ್ದೇ ದೊಡ್ಡ ಸುದ್ದಿಯಾಗಿತ್ತು. ಪ್ರಧಾನಮಂತ್ರಿಗಳಿಂದ ಹಿಡಿದು ಪ್ರತಿಯೊಬ್ಬರೂ ನೆರೆ ಸಂತ್ರಸ್ತರಿಗೆ ಕನಿಕರ ಮತ್ತು ಸಂತಾಪ ಸೂಚಿಸುತ್ತಿದ್ದರು. ವಿರೋಧ ಪಕ್ಷಗಳ ನಾಯಕರು ಆಡಳಿತ ಪಕ್ಷ ಸಂದರ್ಭವನ್ನು ಸರಿಯಾಗಿ ನಿಭಾಯಿಸುತ್ತಿಲ್ಲವೆಂದು ಖಂಡಿಸುತ್ತಿದ್ದರು. ರಾಜ್ಯ ನಾಯಕರು ವೈಮಾನಿಕ ಸಮೀಕ್ಷೆ ನಡೆಸಿ ಬೇಗನೆ ನೆರೆ ಪರಿಹಾರವನ್ನು ಘೋಷಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿದ್ದರು. ಕೆಲವು ಚಾನೆಲ್‌ನವರಂತೂ ಪ್ರವಾಹ ಪೀಡಿತ ಪ್ರದೇಶಗಳ ತುಂಬಾ ಇಂಟೀರಿಯರ್ ಜಾಗಗಳಿಗೆ ತೆರಳಿ ಜನರ ಭೀಕರ ಪರಿಸ್ಥಿತಿಯನ್ನು ಅಲ್ಲಿನ ಜನರನ್ನು ಸಂದರ್ಶಿಸುವ ಮೂಲಕ ಬಿತ್ತರಿಸುತ್ತಿದ್ದರು.

ನಯ್ಯಾರ್ ಎಂಟೂವರೆ ಗಂಟೆಗೆ ಊಟಕ್ಕೆ ಸೇರೋಣವೆಂದು ಹೇಳಿ ತಮ್ಮ ರೂಮಿಗೆ ಹೋಗಿದ್ದರು. ನಾನು ನನ್ನ ರೂಮಿಗೆ ಹೋಗಿ ಬಿಸಿನೀರಿನಲ್ಲಿ ಸ್ನಾನ ಮಾಡಿದ್ದೆ. ಅಂಥ ಆಯಾಸವೇನೂ ಆಗಿರಲಿಲ್ಲ ನನಗೆ. ನೆರೆ ಪರಿಹಾರ ಕಾರ್ಯಗಳಲ್ಲಿ ತೊಡಗಿದವರ ಮುಖಗಳಲ್ಲಿ ಆಯಾಸ ಕಾಣುತ್ತಿದ್ದರೂ, ಅಂಥ ಆಯಾಸದ ಚಹರೆ ಕೆ.ಎಮ್. ನಯ್ಯಾರ್ ಮತ್ತು ಭಗವಾನ್ ಕುಟ್ಟಿಯ ಮುಖಗಳಲ್ಲಿ ಮಾತ್ರ ಇಣುಕಿರಲಿಲ್ಲ. ಅರ್ಧ ಗಂಟೆ ಕಳೆದಿರಬೇಕು, ಭಗವಾನ್ ಕುಟ್ಟಿ ಬಂದು ನಯ್ಯಾರ್ ನನ್ನನ್ನು ತಮ್ಮ ರೂಮಿಗೆ ಕರೆಯುತ್ತಿರುವುದಾಗಿ ಹೇಳಿ ಊಟದ ವ್ಯವಸ್ಥೆ ಮಾಡಲು ತೆರಳಿದ್ದ. ನಯ್ಯಾರರ ರೂಮನ್ನು ಪ್ರವೇಶಿಸಿದಾಗ ಬೆಚ್ಚನೆಯ ವಾತಾವರಣದ ಸ್ಪರ್ಶವಾಗಿತ್ತು. ಅಂಥ ವೈಭವೋಪೇತ ಮಲಗುವ ಕೋಣೆಯನ್ನು ಇದುವರೆಗೂ ಕಂಡಿರಲಿಲ್ಲ ನಾನು. ಕೋಣೆಯ ಎಲ್ಲಾ ಪರಿಕರಗಳೂ ಆಂಟಿಕ್ ಆಗಿದ್ದವು. ಅವರು ಒರಗಿಕೊಂಡಿದ್ದ ಮಂಚ ತೂಗುಯ್ಯಾಲೆಯಲ್ಲಿ ಮಲಗಿಸಿದಂತಿತ್ತು. ಎಂಥದ್ದೋ ಸುಗಂಧ ದ್ರವ್ಯದ ಮೂಲಿಕೆಯನ್ನು ಸುಟ್ಟಿದ್ದರಿಂದಾಗಿ ಅಗ್ಗಿಷ್ಟಿಕೆಯ ಕಡೆಯಿಂದ ಘಮಘಮ ಸುವಾಸನೆಯನ್ನು ಹೊತ್ತ ತೆಳುವಾದ ಹೊಗೆ ಹರಡಿಕೊಂಡಿತ್ತು. ಕೆ.ಎಮ್. ನಯ್ಯಾರ್ ಸೋಫಾದಲ್ಲಿ ಕುಳಿತಿದ್ದವರು ನನ್ನನ್ನು ತಮ್ಮ ಪಕ್ಕದ ಸೋಫಾದಲ್ಲಿಯೇ ಕೂರಲು ಹೇಳಿದ್ದರು. ನಾನು ಕುಳಿತುಕೊಳ್ಳುತ್ತಿರುವಾಗ, 'ಏನಾದರೂ ತಗೋತೀರಾ?' ಎಂದು ಕೇಳಿದ್ದರು. ಹಿಂದಿನ ದಿನದ ಮುಜುಗರ ನನ್ನಲ್ಲೀಗ ಉಳಿದಿರಲಿಲ್ಲ.

'ತಾವು ಏನು ತಗೋತೀರೋ ಅದನ್ನೇ ನಾನು ಸ್ವಲ್ಪ ತಗೋತೀನಿ' ಎಂದಿದ್ದೆ. ಹೊರಗಿನ ಯಾವ ಶಬ್ದಗಳೂ ರೂಮಿಗೆ ಕೇಳುತ್ತಿರಲಿಲ್ಲ. 'ವೆರಿಗುಡ್. ಸ್ವಲ್ಪ ವಿಸ್ಕಿಯನ್ನೇ ಕುಡಿಯೋಣ. ಇವೊತ್ತು ಎಲ್ಲರಿಗೂ ವಿಸ್ಕಿಯನ್ನು ಕೊಡಲು ಹೇಳಿದ್ದೇನೆ. ಭಗವಾನ್ ಕುಟ್ಟಿ ಅದರ ವ್ಯವಸ್ಥೆ ಮಾಡುತ್ತಿದ್ದಾನೆ. ಭಗವಾನ್ ಕುಟ್ಟಿ ಎಂಥ ಚಾಣಕ್ಯ ಎಂದರೆ ಈ ರಾಜ್ಯದ ಮುಖ್ಯಮಂತ್ರಿ ಹುದ್ದೆಯನ್ನು ನೀಡಿದರೂ ಸುನಾಯಾಸವಾಗಿ ನಿಭಾಯಿಸಿಬಿಡುತ್ತಾನೆ. ಈಗ ಬಂದಿರುವ ಹತ್ತರಷ್ಟನ್ನು ಜಾಸ್ತಿ ಪ್ರವಾಹ ಬಂದರೂ ಈ ಮನೆಗೆ ಏನೂ ಆಗುವುದಿಲ್ಲ. ಮನೆ ಕಟ್ಟುವಾಗ ಅಮೆರಿಕದಿಂದ ಸ್ಟ್ರಕ್ಚರಲ್ ಎಂಜಿನಿಯರ್‌ಗಳು ಬಂದಿದ್ದರು. ಆರು ತಿಂಗಳು ಇದ್ದರು ಇಲ್ಲಿ' ಎಂದು ಮಾತು ನಿಲ್ಲಿಸಿದವರು ಲ್ಯಾಂಡ್ ಫೋನಿನಿಂದ ಯಾರನ್ನೋ ಬರಹೇಳಿದ್ದರು. ನನ್ನ ಕಡೆಗೆ ತಿರುಗಿ, 'ನಾವು ಎಲ್‌ಎಸ್ಡಿ ಟ್ರಿಪ್ ಶುರುಮಾಡಿ ಒಂಬತ್ತು ಗಂಟೆಗಳಾದವು. ಭಗವಾನ್ ಕುಟ್ಟಿ ನಿಮಗೆ ಬಾಳೆಹಣ್ಣಿನಲ್ಲಿ ಎಲ್‌ಎಸ್ಡಿ ಕೊಟ್ಟಿದ್ದಾನೆ. ಹಾಗೆ ಕೊಡಲು ನಾನೇ ಹೇಳಿದ್ದು. ನಮ್ಮ ದುಃಖ ಮತ್ತು ಭಾವನೆಗಳನ್ನು ಎಲ್‌ಎಸ್ಡಿ ಕಂಟ್ರೋಲ್ ಮಾಡಿ ನಮ್ಮನ್ನು ಸ್ಥಿತಪ್ರಜ್ಞಾವಸ್ಥೆಯಲ್ಲಿ ಭದ್ರವಾಗಿ ಸಂರಕ್ಷಣೆ ಮಾಡುತ್ತದೆ'. ಅಷ್ಟರಲ್ಲಿ ಬಾಗಿಲೇ ಕಾಣದಂತಿದ್ದ ಗೋಡೆಯನ್ನು ತಳ್ಳಿಕೊಂಡು ಸುಮಾರು ನಲವತ್ತು ವರ್ಷವಿರಬಹುದಾದ ವ್ಯಕ್ತಿಯೊಬ್ಬ ಪ್ರವೇಶಿಸಿದ್ದ. ಮತ್ತೆ ಗೋಡೆ ಮುಚ್ಚಿಕೊಂಡಂತೆ, ಅಲ್ಲಿ ಬಾಗಿಲಿರುವ ಕುರುಹೂ ಕಾಣದಂತೆ!

ಭಾಗ–9

ನನ್ನ ಅಚ್ಚರಿಯನ್ನು ಗಮನಿಸಿದ ಕೆ.ಎಮ್. ನಯ್ಯಾರ್ 'ಈ ಕೊಠಡಿಗೆ ರೈಂಬೋ ಟೆಕ್ನಾಲಜಿಯನ್ನು ಅಳವಡಿಸಿದ್ದೇವೆ. ಹಳೆಯ ಕಾಲದಲ್ಲಿದ್ದ ಇಂದ್ರಜಾಲ ವಿದ್ಯೆಯನ್ನು ಬೇಸಾಗಿಟ್ಟುಕೊಂಡು ರೈಂಬೋ ಟೆಕ್ನಾಲಜಿಯನ್ನು ಡೆವೆಲಪ್ ಮಾಡಿದ್ದಾರಂತೆ. ಕೇರಳದಲ್ಲಿ ಸುಮಾರು ಮನೆಗಳಲ್ಲಿ ಒಂದೊಂದು ರೂಮಿಗೆ ಈ ಟೆಕ್ನಾಲಜಿಯನ್ನು ಬಳಸಿಕೊಂಡಿದ್ದಾರೆ. ಎಸ್ಪೆಷಲಿ ಜ್ಯುವೆಲರಿ ಬಿಸಿನೆಸ್‌ನಲ್ಲಿ ಇರೋರು ಇದನ್ನ ಕಾಮನ್ನಾಗಿ ಅಳವಡಿಸಿಕೊಳ್ತಾರೆ. ಇತ್ತೀಚಿನ ದಿನಗಳಲ್ಲಿ ಪೊಲಿಟಿಷಿಯನ್ಸ್ ತಮ್ಮ ಬ್ಲಾಕ್ ಮನಿಯನ್ನು ಜ್ಯುವೆಲರಿ ಬಿಸಿನೆಸ್‌ನಲ್ಲಿ ಇಡ್ತಿದಾರೆ. ಕರೆನ್ಸಿ ಬಿಟ್ರೆ ಲಿಕ್ವಿಡಿಟಿ ಕ್ಯಾರೆಕ್ಟರ್ ಹೆಚ್ಚಾಗಿರೋದು ಗೋಲ್ಡ್‌ನಲ್ಲಿಯೇ. ಗೋಲ್ಡ್ ಈಸ್ ಆಲ್ವೇಸ್ ಗೋಲ್ಡ್. ಬಂಗಾರಕ್ಕೆ ಪರ್ಯಾಯವಾದ ಮೆಟಲ್ ಬೇರೊಂದಿಲ್ಲ ಇಡೀ ಜಗತ್ತಿನಲ್ಲಿ' ಎಂದು ಹೇಳಿ, ಬಂದ ವ್ಯಕ್ತಿಯ ಕಡೆ ಗಮನಹರಿಸಿ, 'ನೋಡು ಮನೋಹರ, ನಮಗಿಬ್ಬರಿಗೂ ಒಳ್ಳೆ ಡ್ರಿಂಕ್ಸ್ ಮತ್ತು ಊಟ ವ್ಯವಸ್ಥೆ ಮಾಡು. ಹತ್ತು ನಿಮಿಷಗಳ ಬಳಿಕ ಡ್ರಿಂಕ್ಸ್ ರೆಡಿಯಾಗಿರಲಿ' ಎಂದು ಹೇಳಿದ್ದರು. ಮನೋಹರ್ ಎನ್ನುವ ವ್ಯಕ್ತಿ ಹೇಗೆ ಪ್ರತ್ಯಕ್ಷವಾದನೋ ಹಾಗೇ ಮಾಯವಾಗಿದ್ದ.

'ಇವನು ಮನೋಹರ್ ಕುಂಜು ಅಂತ. ಓದಿರೋದು ಎಂ.ಎಸ್. ಬಯೋಟೆಕ್ನಾಲಜಿ. ಆದರೆ ರಬ್ಬರ್ ಕೃಷಿ ಮತ್ತು ವ್ಯಾಪಾರದಲ್ಲಿ ಭಯಂಕರ ನಿಪುಣ. ನಮ್ಮ ರಬ್ಬರ್ ತೋಟಗಳ ಉಸ್ತುವಾರಿ ಇವನೇ ನೋಡಿಕೊಳ್ತಾನೆ. ಇವನು ಬಂದ ಮೇಲೆ ತೋಟದಲ್ಲಿ ರಬ್ಬರ್ ಇಳುವರಿ ಡಬ್ಬಲ್ ಆಗಿದೆಯಲ್ಲದೆ ರಬ್ಬರ್ ವ್ಯಾಪಾರದ ವಹಿವಾಟು ಕೂಡಾ ದುಪ್ಪಟ್ಟಾಗಿದೆ. ಇವನಿಗೆ ನನ್ನ ಲಾಭದಲ್ಲಿ ಒಂದು ಪರ್ಸೆಂಟ್ ಕಮೀಷನ್ ಕೊಡ್ತೀನಿ. ತುಂಬಾ ನಂಬಿಕಸ್ಥ, ಹಾಗಾಗಿ ಈ ರೂಮಿನೊಳಕ್ಕೆ ಅವನಿಗೆ ಪ್ರವೇಶವಿದೆ. ನಮ್ಮ ಭಗವಾನ್ ಕುಟ್ಟಿ ಕೂಡಾ ಅಷ್ಟೇ ನಂಬಿಕಸ್ಥ. ಆದರೆ ತುಂಬಾ ಔಟ್ ಸ್ಪೋಕನ್ ಮನುಷ್ಯ' ಎಂದು ಹೇಳುತ್ತಿರುವಾಗ ಫೋನ್ ರಿಂಗಾಗಿತ್ತು. ಅದು ವಾಟ್ಸಾಪ್ ವಿಡಿಯೊ ಕಾಲ್ ಆಗಿತ್ತು. ನಯ್ಯಾರ್ ಕಾಲ್ ರಿಸೀವ್ ಮಾಡಿಕೊಂಡ ತಕ್ಷಣ ಮುಂದೆ ಇದ್ದ ಟಿವಿ ಪರದೆಯ ಮೇಲೆ ಸಿಂಧು ಮೆನನ್ ಕಾಣಿಸಿಕೊಂಡಿದ್ದಳು. ಡ್ಯಾನ್ಸ್ ಡ್ರೆಸ್ಸಿನಲ್ಲಿದ್ದವಳ ಕಣ್ಣುಗಳು ತೇವಗೊಂಡಿದ್ದವು.

'ಓ ವ್ಹಾಟ್ ಎ ವಯಲೆಂಟ್ ಟ್ರಾಜೆಡಿ ಪಪ್ಪಾ. ಅರುಂಧತಿ, ಮಾಧವನ್ ಮಾವ ಇಲ್ಲದೆ ಇರೋದನ್ನ ಹೇಗೆ ಸಹಿಸಿಕೊಳ್ಳೋದು. ಡ್ಯಾನ್ಸ್ ಪ್ರೋಗ್ರಾಂ ಕ್ಯಾನ್ಸಲ್ ಮಾಡ್ಬೇಕು ಅನ್ನಿಸಿದರೂ ಮಾಡ್ಲಿಲ್ಲ ಪಪ್ಪಾ. ಅದರ ಹಣಾನ ಫ್ಲಡ್ ರಿಲೀಫ್ ಫಂಡ್‌ಗೆ ಕೊಡೋಣ ಅಂತ ನಾನೇ ಹೇಳ್ದೆ. ಟೀವಿಯಲ್ಲಿ ನಿಮ್ಮನ್ನ ನೋಡ್ದೆ. ಇಂಥ ಟೈಮಲ್ಲಿ ನೀವು ಎಲ್‌ಎಸ್ಡಿ ಟ್ರಿಪ್‌ನಲ್ಲಿ ಇರ್ತೀರಾ ಅಂಥ ನನಗೇನೂ ಗೊತ್ತಿಲ್ವಾ? ಇನ್ನೂ ಒಂದು ವಾರ ನಾನು ಡಾಕ್ಟರ್ ಆಮ್ರಪಾಲಿ ಜೊತೇಲಿ ಇರ್ತೀನಿ' ಎಂದವಳು, 'ಹಾಯ್ ಕ್ರಾಂತಿ ಕಿರಣ್, ಪಪ್ಪಾನ ಜೊತೆ ಈ ಟೈಮಿನಲ್ಲಿ ನೀವಿರೋದು ನನಗೆಷ್ಟೋ ಸಮಾಧಾನ ತಂದಿದೆ. ನಿನ್ನೆ ಸಂಜೆ ದಿಲ್ಲಿಗೆ ಬರೋವಾಗ ನನ್ನನ್ನು ಏರ್‌ಪೋರ್ಟ್‌ನಲ್ಲಿ ಡ್ರಾಪ್ ಮಾಡಿದ ಅರುಂಧತಿ ನಿಮ್ಮ ಬಗ್ಗೆ ತುಂಬಾ ಹೇಳಿದ್ಲು. ಹೌ ಕೆನ್ ಐ ಲಿವ್ ವಿಥೌಟ್ ಹರ್, ಓ ಮೈಗಾಡ್...' ಎಂದು ಬಿಕ್ಕಿದ್ದಳು. ಕೆ.ಎಮ್. ನಯ್ಯಾರ್, 'ಬೀ ಕೂಲ್ ಬೇಬಿ ಪ್ಲೀಸ್..' ಎಂದು ನಗುತ್ತಲೇ ಎರಡು ಹನಿ ಕಣ್ಣೀರು ಕೆಡವಿದ್ದರು. ಫೋನ್ ಕಟ್ ಆಗಿತ್ತು. ಮತ್ತೆ ಫೋನ್ ಕನೆಕ್ಷನ್ ಸಿಕ್ಕಾಗ ಡಾಕ್ಟರ್ ಆಮ್ರಪಾಲಿ ಕಾಣಿಸಿಕೊಂಡಿದ್ದಳು. 'ನಯ್ಯಾರ್ ಅಂಕಲ್, ಪ್ರಕೃತಿಯೇ ಅಲ್ಟಿಮೇಟ್, ಘಟಿಸುವ ಪ್ರತಿಯೊಂದು ವರ್ತಮಾನದ ಸಂಗತಿಗಳನ್ನು ಸ್ವೀಕರಿಸುವ ಮನೋಧರ್ಮ ನಾವು ಬೆಳೆಸಿಕೊಳ್ಳಬೇಕು. ಆ ಬಗ್ಗೆ ನಿಮಗೆ ಬಹಳವೇ ತಿಳಿದಿದೆ, ನಾನೇನೂ ಹೆಚ್ಚಿಗೆ ಹೇಳಬೇಕಾಗಿಲ್ಲ. ನಾನು ಸಿಂಧೂನ ಸೇಫಾಗಿ ನೋಡ್ಕೊತೀನಿ, ನೀವು ಚಿಂತೆ ಮಾಡಬೇಡಿ. ಈಗ ಊಟದ ಜೊತೆಗೆ ಸ್ವಲ್ಪ ಐಸ್ ವೈನ್ ಕೊಡ್ತೀನಿ. ಒಳ್ಳೆ ನಿದ್ದೆ ಮಾಡಿದ್ರೆ ಸರಿಹೋಗುತ್ತೆ' ಎಂದು ಆ ಕಡೆಯಿಂದ ಫೋನ್ ಕಟ್ ಮಾಡಿದ್ದಳು. ಆಮ್ರಪಾಲಿ! ಸಿಂಧು ಮೆನನ್‌ಗಿಂತಲೂ ತುಂಬಾ ಸುಂದರವಾಗಿದ್ದಳು! ಸ್ಲಂನಲ್ಲಿ ಹುಟ್ಟಿದ ಪ್ರತಿಭೆ. ಕೊಳಚೆಯಲ್ಲಿ ಯಾವಾಗಲೂ ಫಲವತ್ತತೆ ಅಧಿಕವಾಗಿರುತ್ತದೆ!

ಸ್ಕ್ರೀನ್ ಖಾಲಿಯಾಗುತ್ತಿದ್ದಂತೆ ಮನೋಹರ್ ಕುಂಜು ಮಾಮೂಲಿ ಬಾಗಿಲು ಮೂಲಕವೇ ಒಳ ಬಂದು ಒಂದು ದೊಡ್ಡ ಪ್ಲೇಟಿನಲ್ಲಿ ಡ್ರಿಂಕ್ಸ್ ತುಂಬಿದ ಗ್ಲಾಸ್ ಜೊತೆಗೆ ಹುರಿದ ಮಸಾಲೆ ಗೋಡಂಬಿ, ಬಾಳೆಕಾಯಿ ಚಿಪ್ಸ್ ತಂದು ಟೇಬಲ್ ಮೇಲಿಟ್ಟು, ಅರ್ಧ ಗಂಟೆಗೆ ಊಟ ರೆಡಿಯಾಗುತ್ತದೆಂದು ಹೇಳಿ ಹೋಗಿದ್ದ. ಇಂದು ತುಂತುರು ಮಳೆ ಮಾತ್ರವಿದ್ದು